ಒಂದು ಇನ್ನೂ ನೇಮಕಾತಿಗೆ ಎಸ್.ಎಸ್.ಎಲ್.ಸಿ ಕನಿಷ್ಟ ವಿದ್ಯಾರ್ಹತೆ, ನಂತರ ಅವರ ವಿದ್ಯಾರ್ಹತೆ ಏನೇ ಇರಬಹುದು, ಅದನ್ನೂ ಕೂಡ ನಾವು ಸಭೆಯಲ್ಲಿ ಚರ್ಚೆ ಅಂತಿಮ ತೀರ್ಮಾನವನ್ನು ತಮಗೆ ತಿಳಿಸುತ್ತೇವೆ. ಮಾನ್ಯ ಸದಸ್ಯರುಗಳು ಏನು ಕಟ್ಟಡಗಳ ವಿಚಾರದಲ್ಲಿ ಹೇಳಿದ್ದಾರೆ, ಈಗಾಗಲೇ ಇರತಕ್ಕಂತಹ ಅಂಗನವಾಡಿ ಕೇಂದ್ರಗಳ ಕಟ್ಟಡಗಳಲ್ಲಿ ಶೇಕಡ 60ರಷ್ಟು ಕಟ್ಟಡಗಳು ಈಗಾಗಲೇ ರಿಪೇರಿಗೆ ಬಂದಿವೆ. ಹೊಸ ಕಟ್ಟಡಗಳನ್ನೂ ಕೂಡ ಕಟ್ಟಬೇಕಾಗಿದೆ. ಇದನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ಕಾರದಲ್ಲಿ ಹಣದ ಲಭ್ಯತೆಯನ್ನು ನೋಡಿಕೊಂಡು ಅದನ್ನು ಮಾಡುತ್ತೇವೆ. ಜೊತೆಗೆ ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯುವುದರ ಬಗ್ಗೆ ನಾವು ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುತ್ತೇವೆ. ಅಗತ್ಯಕ್ಕೆ ಅನುಗುಣವಾಗಿ ಕಟ್ಟಡಗಳು ಬೇಕೆಂದು ಹೇಳುತ್ತೇವೆ. ಮಾನ್ಯ ಸದಸ್ಯರು ಏನು ಪಟ್ಟಣಗಳಲ್ಲಿ ಕಟ್ಟಡಗಳನ್ನು ಕಟ್ಟಬೇಕೆಂದು ಹೇಳುತ್ತಿದ್ದಾರೆ, ಪಟ್ಟಣ ಪಂಚಾಯಿತಿಯವರು ಅಥವಾ ಪುರಸಭೆಯವರು ಅವರು ಕೊಡತಕ್ಕಂತಹ ನಿವೇಶನಗಳ ಆಧಾರದ ಮೇಲೆ, ಬಹಳಷ್ಟು ಕಡೆ ಅವರು ನಿವೇಶನಗಳನ್ನೇ ಕೊಡುವುದಿಲ್ಲ. ಕೊಟ್ಟರೆ ಅದನ್ನು ನಾವು ಗಮನದಲ್ಲಿಟ್ಟುಕೊಂಡು ಕಟ್ಟಡಗಳನ್ನು ಮಂಜೂರು ಮಾಡಿ ಕೊಡುತ್ತೇವೆ. ಕಟ್ಟಡ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇವೆ.

ಬೆಂಗಳೂರಿನ ಅರ್ಕಾವತಿ ಬಡಾವಣೆಯಲ್ಲಿ ನಿವೇಶನಗಳ ಹಂಚಿಕೆ

143 (754) ಶ್ರೀ ವಾಟಾಳ್ ನಾಗರಾಜ್: (ಚಾಮರಾಜನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರ್ಕಾವತಿ ಬಡಾವಣೆಯ ಕಾಮಗಾರಿಯು ಯಾವಾಗ ಆರಂಭವಾಯಿತು:

ಆ) ಅರ್ಕಾವತಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಮಾಡಲು ಸರ್ಕಾರ ತೀರ್ಮಾನಿಸಿದೆ;

ಇ) ಬೆಂಗಳೂರು ನಗರದಲ್ಲಿ ನಿವೇಶನ ಕೋರಿ ಎಷ್ಟು ಜನ ಫಲಾನುಭವಿಗಳು ಇದುವರೆಗೂ ಮನವಿಯನ್ನು ಸಲ್ಲಿಸಿದ್ದಾರೆ;

ಈ) ಅರ್ಕಾವತಿ ಬಡಾವಣೆಯ ಕಾಮಗಾರಿಗೆ ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ;

ಉ) ಈ ಭೂಮಿಯನ್ನು ವಶಪಡಿಸಿಕೊಂಡ ರೈತರಿಗೆ ಇದುವರೆಗೂ ಕೊಟ್ಟಿರುವ ಹಣ ಎಷ್ಟು;

ಊ) ರೈತರಿಗೆ ಇನ್ನೂ ಕೊಡಬೇಕಾಗಿರುವ ಹಣವೆಷ್ಟು:

ಋ) ಬೆಂಗಳೂರು ನಗರದಲ್ಲಿ ನಿವೇಶನ ಕೋರಿ ಅರ್ಜಿದಾರರು ನೀಡಿರುವ ಠೇವಣಿ ಹಣವೆಷ್ಟು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು)

ಅ) 15.12.2004

ಆ) ಅಧಿಸೂಚನೆಯಂತೆ ಅರ್ಕಾವತಿ ಬಡಾವಣೆಯಲ್ಲಿ ಒಟ್ಟು 20,000 ನಿವೇಶನಗಳನ್ನು ರಚಿಸಲು ತೀರ್ಮಾನಿಸಲಾಗಿತ್ತು. ಆದರೆ, ಮಾನ್ಯ ನ್ಯಾಯಾಲಯವು ಭೂಸ್ವಾಧೀನ ಪಡಿಸಿರುವ ಜಮೀನಿನ ಮೇಲೆ ಆದೇಶಗಳನ್ನು ನೀಡಿದ್ದರ ಹಿನ್ನೆಲೆಯಲ್ಲಿ ಜಮೀನಿನ ಲಭ್ಯತೆಗೆ ಅನುಗುಣವಾಗಿ 14,000 ನಿವೇಶನಗಳನ್ನು ರಚಿಸಲಾಗಿರುತ್ತದೆ. ವಿವಿಧ ಅಳತೆಯ 8,813 ನಿವೇಶನಗಳನ್ನು ಈಗಾಗಲೇ ಹಂಚಿಕೆ ಮಾಡಲು ಕ್ರಮ ಕೈಗೊಂಡಿದ್ದು, ಉಳಿದ ನಿವೇಶನಗಳನ್ನು ಮೂಲ ನಿವೇಶನಗಳನ್ನಾಗಿ ಮತ್ತು ಇನ್ನೂ ಉಳಿದವುಗಳನ್ನು ಭೂಮಾಲಿಕರಿಗೆ ಹಂಚಿಕೆ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಮುಂದೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

ಇ) ಅರ್ಕಾವತಿ ಬಡಾವಣೆ ನಿವೇಶನ ಹಂಚಿಕೆಗಾಗಿ ಪ್ರಾಧಿಕಾರವು ದಿನಾಂಕ:21/02/2004 ರಂದು ವಿವಿಧ ಅಳತೆಯ ಒಟ್ಟು 20,000 ನಿವೇಶನಗಳನ್ನು ಹಂಚಿಕೆ ಮಾಡಲು ಅಧಿಸೂಚನೆಯನ್ನು ಹೊರಡಿಸಿದ್ದು, ಕ್ರಮವಾಗಿ 20X30 ಅಡಿ ಅಳತೆಯ ನಿವೇಶನಗಳಿಗೆ 51126, 30X40 ಅಡಿ ಅಳತೆಯ ನಿವೇಶನಗಳಿಗೆ 83307, 40X60 ಅಡಿ ಅಳತೆಯ ನಿವೇಶನಗಳಿಗೆ 61637 ಮತ್ತು 50X80 ಅಡಿ ಅಳತೆಯ ನಿವೇಶನಗಳಿಗೆ 41020 ಹೀಗೆ ಒಟ್ಟು 2,37,090 ಅರ್ಜಿಗಳನ್ನು ಪ್ರಾರಂಭಿಕ ಠೇವಣಿಯೊಂದಿಗೆ ಸ್ವೀಕೃತವಾಗಿದೆ.

ಈ) ಅರ್ಕಾವತಿ ಬಡಾವಣೆಯ ಯೋಜನೆಗಾಗಿ 2,750 ಎಕರೆ ಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಿ, 1,618 ಎಕರೆ ಜಮೀನಿಗೆ ಐತೀರ್ಮ ರಚಿಸಿ ಇಲ್ಲಿಯವರೆಗೆ 1,224 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುತ್ತದೆ.

ಉ) ಇಲ್ಲಿಯವರೆಗೆ 3.14 ಕೋಟಿ ರೂಪಾಯಿಗಳನ್ನು ಭೂ ಮಾಲಿಕರುಗಳಿಗೆ ಪರಿಹಾರವನ್ನಾಗಿ ಪಾವತಿಸಲಾಗಿದೆ

ಊ) ಇದುವರೆವಿಗೆ 1224 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಂಡಿದ್ದು, ಇದರ ಬಾಬ್ತು ಒಟ್ಟು ರೂ. 244.80 ಕೋಟಿ ಪಾವತಿಸಬೇಕಾಗಿರುತ್ತದೆ. ಈ ಪೈಕಿ 3.14 ಕೋಟಿ ರೂ.ಗಳನ್ನು ಪಾವತಿಸಲಾಗಿರುತ್ತದೆ. ಉಳಿಕೆ ರೂ. 241.66 ಕೋಟಿಗಳನ್ನು ಪಾವತಿಸಬೇಕಾಗಿರುತ್ತದೆ.

ಋ) ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ನಿವೇಶನ ಕೋರಿ ಅರ್ಜಿದಾರರು ನೀಡಿದ ಪ್ರಾರಂಭಿಕ ಠೇವಣಿ ರೂ. 954.27 ಕೋಟಿಗಳನ್ನು ಮಾರ್ಚ್ 2005ರ ಹಾಗೂ ಆಗಸ್ಟ್ 2005ರಲ್ಲಿ ಸಂಪೂರ್ಣವಾಗಿ ಎಲ್ಲಾ ಅರ್ಜಿದಾರರಿಗೆ ಹಿಂದಿರುಗಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಅಧ್ಯಕ್ಷರೆ, 754ನೇ ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಇದ್ದರೆ ಅವರನ್ನೇ ನೇರವಾಗಿ ಕೇಳುತ್ತಿದ್ದೇನೆ. ಎಲ್ಲಿ ಅವರು?

ಶ್ರೀ ಎಂ.ಪಿ.ಪ್ರಕಾಶ್:ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಲೇಶಿಯಾ ಮತ್ತು ಸಿಂಗಾಪುರದ ಪ್ರಧಾನ ಮಂತ್ರಿಗಳ ವೈಯುಕ್ತಿಕ ಆಹ್ವಾನದ ಮೇರೆಗೆ ಬಹಳ ಮುಖ್ಯವಾದ ಕೆಲಸಕ್ಕೆ

ತಮ್ಮ ಅಪ್ಪಣೆಯನ್ನೂ ಕೂಡ ಪಡೆದು ಹೋಗಿದ್ದಾರೆ. ಅವರ ಪರವಾಗಿ ನಾನು ಉತ್ತರ ಕೊಡಲಿಕ್ಕೆ ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಏನು ಮನವಿ ಮಾಡುತ್ತಿದ್ದೇನೆಂದರೆ, ನೆನ್ನೆ ಇಡೀ ದಿನ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರದಲ್ಲಿಯೇ ಸುಮಾರು 12 ಸಮಾರಂಭಗಳಲ್ಲಿ ಭಾಗವಹಿಸಿದ್ದಾರೆ. ಈ ಸದನ ನಡೆಯುತ್ತಿತ್ತು. ಈ ಸದನಕ್ಕೆ ಒಂದು ನಿಮಿಷ ಒಳಗೆ ಬಂದು ಸದನದಲ್ಲಿ ಕುಳಿತುಕೊಳ್ಳಲಿಲ್ಲ. ಇವತ್ತು ಸದನ ನಡೆಯುತ್ತಿರುವಾಗ ವಿದೇಶಕ್ಕೆ ಹೋಗಿದ್ದಾರೆ. ನಿಜಕ್ಕೂ ಇದು ಸದನಕ್ಕೆ ಗೌರವ ತರುವಂತದ್ದು ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ ನನಗೆ ವೈಯುಕ್ತಿಕವಾಗಿ ದ್ವೇಷ ಇಲ್ಲ. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಆದರೆ ಈ ಸದನ ಎಲ್ಲರಿಗಿಂತ ಬಹಳ ಎತ್ತರದಲ್ಲಿರುವಂತಹ ಈ ಸದನ ಸಂವಿಧಾನದಲ್ಲಿ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಎಲ್ಲದರಲ್ಲಿಯೂ ಮುಖ್ಯವಾದದು. ಆದರೆ ನಾವು ಯಾರನ್ನು ಕೇಳಬೇಕು? ನಿಜ ಅಲ್ಲಿ ಯಾರು ಬೇಕಾದರೂ ಉತ್ತರ ಕೊಡಬಹುದು, ನಿಮ್ಮ ಜಂಟಿ ವ್ಯವಸ್ಥೆ ಇದೆ. ರಕ್ಷಣೆ ಇದೆ. ನೀವು ಉತ್ತರ ಕೊಡಬಹುದು. ಆದರೆ ನನಗೆ ನಾನು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಇಲ್ಲದಿದ್ದರೂ ಕೂಡ ತಮಗೆ ನಾನು ಕೇಳುತ್ತೇನೆ. ಈ ಸದನದ ಅಧ್ಯಕ್ಷತೆಯನ್ನು ತಾವು ವಹಿಸಿದ್ದೀರಿ. ಈ ಸದನದ ಗೌರವ ಏನು, ಈ ಸದನದ ಪ್ರಶ್ನೆ ಏನು? ಸದನದ ಪ್ರತಿಷ್ಟೆ ಏನು?

ಅಧ್ಯಕ್ಷರು:ಪ್ರಶ್ನೆ ಕೇಳಿ ಸ್ವಾಮಿ, ಪ್ರಶ್ನೆ ಬಿಟ್ಟು ಉಳಿದ ವಿಚಾರಗಳನ್ನು ಮಾತನಾಡಿದರೆ ಹೇಗೆ? ಅವರು ಹೇಳಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ಸಿಂಗಾಪುರಕ್ಕೆ ಹೋಗಿದ್ದಾರೆ. ಈ ಸರ್ಕಾರದ ಪರವಾಗಿ ಅಲ್ಲಿಯ ಸರ್ಕಾರದ ಜೊತೆ ಮಾತುಕತೆ ಆಗಿ ಏನು ಬಂಡವಾಳಗಳನ್ನು ತೆಗೆದುಕೊಂಡು ಬರಬೇಕೆನ್ನುವ ದೃಷ್ಟಿಯಿಂದ ಕೆಲವು ಎಂಒಯುಗಳು ಅದೂ ಇದೂ ಮಾಡಿಕೊಂಡು ಬರುವುದಕ್ಕಾಗಿ ಹೋಗಿದ್ದಾರೆ. ನಿನ್ನೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಎಲ್ಲ ಫ್ಲೋರ್ ಲೀಡರ್ಸ್‌ನ್ನು ವಿನಂತಿ ಮಾಡಿ ಅವರು ಹೋಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ಇಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಮಾತು ಕೇಳಿದ ಮೇಲೆ, ನನಗೆ ಈಗ ಅನ್ನಿಸುತ್ತಿದೆ. ಅವರು ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಹಾಗೆ ನನಗೆ ಅವರ ಮೇಲೆ ಅಪಾರವಾದ ಗೌರವ ಇದೆ, ಎಂದು ಹೇಳುತ್ತಾರೆ. ಒಂದು ಕಡೆ ಅಪಾರ ಗೌರವ, ಇನ್ನೊಂದು ಕಡೆ ಎಲ್ಲಿಂದಲಾದರೂ ತಂದು ಕೊಡಿ ಎಂದು ಹೇಳುವುದು. ಇದು ಒಂದು. ಎರಡನೆಯದು ಅಧ್ಯಕ್ಷರೆ, ಅವರು ಕೇಳತಕ್ಕಂಥದ್ದರಲ್ಲಿ ಅರ್ಥ ಇದೆ. ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಮಾತನಾಡುವಾಗ ಕೂಡ ನಾವು ಈ ಸಲಹೆ ಕೊಟ್ಟೆವು. ಯಾರೇ ಮಂತ್ರಿಗಳಿರಲಿ, ಮುಖ್ಯ ಮಂತ್ರಿಗಳಿಂದ ಹಿಡಿದು ಯಾವ ಇಲಾಖೆಯ ಮಂತ್ರಿಗಳು ಇದ್ದರೂ ಕೂಡ ಸದನ ನಡೆಯುವಾಗ ಕನಿಷ್ಟ ಪಕ್ಷ ಯಾರೂ ಕೂಡ ಟೂರ್ ಹೋಗಬಾರದು. ರಾಜ್ಯದಲ್ಲಿಯೂ ಹೋಗಬಾರದು, ಹೊರಗಡೆ ಹೋಗತಕ್ಕಂಥ ಪ್ರಶ್ನೆ ಇಲ್ಲ. ಅದಕ್ಕೆ

ಎಲ್ಲರೂ ಸ್ಪಂದಿಸಿದೆವು. ಆದರೆ ಮತ್ತೆ ಪುನಃ ಅದೇ ರೀತಿಯಾಗಿ ಮಾಡಿದರೆ ನಾವು ಯಾರಿಗೆ ಹೇಳುವುದು? ತಮ್ಮಿಂದಲೇ ಆಗಿದ್ದು ಇದು. ನಾನೇ ರೈಸ್ ಮಾಡಿದೆ. ಯಾವ ಪುರುಷಾರ್ಥ ಇದು? ಬಂಡವಾಳ ಏನೂ ಒಂದು ದಿವಸದಲ್ಲಿ ಹೊತ್ತುಕೊಂಡು ಬರುವುದಿಲ್ಲ. ಅಥವಾ ಪ್ಲೇನ್ ಮೇಲೆ ಹಾಕಿಕೊಂಡು ಬರುವುದಿಲ್ಲ. ಅದಕ್ಕೇನು ಐದು ಹತ್ತು ದಿವಸ ಹೆಚ್ಚು ಕಡಿಮೆ ಆದರೆ ತೊಂದರೆ ಇಲ್ಲ. ನಿಧಾನವಾಗಿ ಹೋಗಿ ಯಾರ್ಯಾರು ಅವರಿಗೆ ಪರಿಚಯ ಇದ್ದಾರೆ ಅವರ ಬಳಿ ಹೋಗಿ ಬಂಡವಾಳ ತಂದು ಇಲ್ಲಿ ಹೂಡಿ ಚೆನ್ನಾಗಿ ಕೆಲಸ ಮಾಡಲಿ. ಆದರೆ ಸದನ ನಡೆಯುವಾಗ ಹೊರಗಡೆ ಹೋಗಬಾರದು ಎಂದು ತಾವು ನಾವೂ ಎಲ್ಲರೂ ಕುಳಿತು ಚರ್ಚೆ ಮಾಡಿದರೂ ಕೂಡ ಈ ರೀತಿಯಾಗಿ ಹೋಗಬೇಕೆಂದರೆ, ಮತ್ತೇನು ಹೇಳಬೇಕು ನೀವೇ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಎಲ್ಲಾ ಫ್ಲೋರ್ ಲೀಡರ್ಸ್‌ಗೆ ಕರೆದು ತೀರ್ಮಾನ ಮಾಡಿದ್ದೇವೆಮದು ಹೇಳಿದರೆ, ದಯಮಾಡಿ ಕ್ಷಮಿಸಬೇಕು. ನಾವ್ಯಾರೂ ಬಂದಿಲ್ಲ, ನಮಗೇನೂ ವಿಷಯ ಗೊತ್ತಿಲ್ಲ.

ಅಧ್ಯಕ್ಷರು: ನೀವು ಇರಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇರಲಿಲ್ಲ ಅಲ್ಲ. ಗೌರವವನ್ನು ಕೊಡುವುದು, ತೆಗೆದುಕೊಳ್ಳುವುದೂ ತಪ್ಪಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಕಛೇರಿಗೆ ಬಂದು ವಿನಂತಿಸಿಕೊಂಡಿದ್ದೇನೆ. ಸದನ ನಡೆಯುವಾಗ ಯಾರಿಗೂ ಹೊರ ದೇಶಗಳಿಗೆ ಹೋಗುವುದಕ್ಕೆ ಅನುಮತಿ ಕೊಡಬಾರದು, ಎಂದು ಹೇಳಿದ್ದೇನೆ.

ಅಧ್ಯಕ್ಷರು:ನಾನು ಹೇಳಿ ಕಳುಹಿಸಿದ್ದೆ. ಒಂದಲ್ಲ ನಾಲ್ಕು ಸಾರಿ ಹೇಳಿ ಕಳುಹಿಸಿದ್ದೆ ದಯಮಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ:ನೀವು ಕಾಂಗ್ರೆಸ್‌ನವರಿಗೆ ಅವರನ್ನು ಕರೆದು ತೀರ್ಮಾನ ಮಾಡಿದ್ದರೆ ನಮ್ಮದೇನೂ ತಕರಾರು ಇಲ್ಲ. ಫ್ಲೋರ್ ಲೀಡರ್ಸ್ ಎಲ್ಲರನ್ನೂ ಕರೆದಿದ್ದೆವು ಎಂದು ಹೇಳಿದಿರಿ, ನಾವ್ಯಾರೂ ಬಂದಿಲ್ಲ

ಅಧ್ಯಕ್ಷರು:ತಮಗೂ ಆಹ್ವಾನ ಕಳುಹಿಸಿದ್ದೆ, ಆದರೆ ತಾವು ತಮ್ಮ ಕಾರ್ಯ ನಿಮಿತ್ತ ಬರುವುದಕ್ಕಾಗಲಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ತಮ್ಮ ಕೊಠಡಿಗೆ ಬಂದು ಸ್ಪಷ್ಟವಾಗಿ ಹೇಳಿದೆ, ಸದನ ನಡೆಯತಕ್ಕಂತಹ ಸಂದರ್ಭದಲ್ಲಿ ವಿದೇಶಕ್ಕೆ ಹೋಗುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಅನುಮತಿ ಕೊಟ್ಟಿರತಕ್ಕಂಥದ್ದು ಸರಿಯಲ್ಲ. ಈ ಸದನವನ್ನು ಎಲ್ಲ ಸಂದರ್ಭಗಳಲ್ಲಿಯೂ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನೆನ್ನೆ ಇಡೀ ದಿವಸ ಬೆಂಗಳೂರಿನಲ್ಲಿದ್ದರು. ಅವರು ಹೋಗಿದ್ದು ರಾತ್ರಿ 11.00 ಗಂಟೆಗೆ. ಸದನಕ್ಕೆ ಏಕೆ ಬರಲಿಲ್ಲ? ಅಷ್ಟಾದರೂ ಮಾಡಬಹುದಾಗಿತ್ತು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಮೂರು ಜನ ಆಯಾ ಪಕ್ಷಗಳ ಮುಖಂಡರುಗಳು ಅದರಲ್ಲಿ ಸದಸ್ಯರಾಗಿದ್ದಾರೆ. ಹಿಂದೆ ಕೆಲವು ಸಂದರ್ಭದಲ್ಲಿ ಕಾಂಗ್ರೆಸ್‌ನ ಸದಸ್ಯರು ವೈಯಕ್ತಿಕ ಕೆಲವು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ನಿರ್ಲಕ್ಷ್ಯ ಮತ್ತು ಮಲತಾಯಿ ಧೋರಣೆ ಇದೆ ಎಂದು ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕೊಠಡಿಯಲ್ಲಿ ಅವರನ್ನು ಕರೆದಿದ್ದರು. ಆ ಸಭೆಯಲ್ಲಿ ನಮ್ಮನ್ನೂ ಕೂಡ ಕರೆಸಬಹುದಾಗಿತ್ತು ಎಂಬ ವಾದವನ್ನು ಅವರು ಮೂರು ಜನ ಇಟ್ಟಿದ್ದರು. ಅದು ಇರಲಿ, ನಾನು ಏನು ಹೇಳಬೇಕೋ ಹೇಳುತ್ತೇನೆ. ಅದಾದ ಮೇಲೆ ಅವರು ನಂತರದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಗೆ ಎರಡು ಸಾರಿ ಕರೆ ಕಳುಹಿಸಿದರೂ ಕೂಡ ಅವರು ಬರಲಿಲ್ಲ. ನಮಗೆ ಕೆಲವು ಸಲ ಕರೆಯುತ್ತೀರಿ ಕೆಲವು ಸಲ ಕರೆಯುವುದಿಲ್ಲ. ಆದ್ದರಿಂದ ನಾವು ಬರುವುದಿಲ್ಲವೆಂದು ಹೇಳಿ ನಿಮ್ಮ ಅಧಿಕಾರಿಗಳು ಅವರನ್ನು ವೈಯಕ್ತಿಕವಾಗಿ ಕಂಡು ವಿನಂತಿ ಮಾಡಿಕೊಂಡಾಗ ಕೂಡ ಅವರು ಬಂದಿಲ್ಲ. ಆದ್ದರಿಂದ ತಮ್ಮ ಮೂಲಕ ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇನ್ನು ಮುಂದೆ ನಡೆಯುವಂತಹ ಪ್ರತಿಯೊಂದು ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಅವರು ದಯವಿಟ್ಟು ಬರಬೇಕು, ಅವರು ತಮ್ಮ ಸಲಹೆ ಸೂಚನೆಗಳನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಅವರಲ್ಲಿ ನಾನು ವಿನಂತಿ ಮಾಡುತ್ತೇನೆ. ಇನ್ನು ಎರಡನೆಯದಾಗಿ ತಾವು ಹೇಳಿದಂತೆ ಸದನ ನಡೆಯುತ್ತಿರುವಂಥ ಸಂದರ್ಭದಲ್ಲಿ ಸದನಕ್ಕೆ ನಾವು ದೊಡ್ಡ ಗೌರವವನ್ನು ಕೊಡಬೇಕಾಗುತ್ತದೆ. ಮಾನ್ಯ ಹಿರಿಯರಾದಂಥ ಮಲ್ಲಿಕಾರ್ಜುನ ಖರ್ಗೆಯವರು ಈ ವಿಷಯವನ್ನು ಹೇಳಿದಾಗ, ಹೋಗಬಾರದು ಎನ್ನತಕ್ಕಂಥ ಮಾತನ್ನು ಹೇಳಲಿಲ್ಲ. ಅದಕ್ಕಿಂತಲೂ ಹೆಚ್ಚಾಗಿ ಹೇಳಬೇಕೆಂದರೆ ಅಲ್ಲಿಯ ಪ್ರಧಾನ ಮಂತ್ರಿಗಳು, ಸಿಂಗಾಪುರದ ಪ್ರಧಾನ ಮಂತ್ರಿಗಳೂ ಕೂಡ ಬಂಡವಾಳ ಹೂಡಿಕೆಗೆ ಆಸಕ್ತಿಯನ್ನು ವಹಿಸಿ ವೈಯಕ್ತಿಕವಾಗಿ ಆಹ್ವಾನವನ್ನು ಕೊಟ್ಟಿರುವುದರಿಂದ ತಾವು ಹೋಗಬೇಕು ಎನ್ನತಕ್ಕಂಥದ್ದರ ಬಗ್ಗೆ ಚರ್ಚೆಯಾಗಿ ನಾನು ನಾಲ್ಕು ದಿವಸದ ಮಟ್ಟಿಗೆ ಹೋಗಬೇಕಾಗಿತ್ತು ಆದರೆ ಅದನ್ನು ಈಗ ಎರಡು ದಿವಸಗಳಿಗೆ ಸೀಮಿತಗೊಳಿಸಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದರು. ಇಲ್ಲಾ ಆಗಬಹುದು ತಾವು ಇನ್ನೂ ಎರಡು ದಿವಸ ಇರುವವರಾಗಿದ್ದರೆ ಇರಿ, ಮತ್ತೆ ಸೋಮವಾರ ದಿವಸ ಬೇರೆ ವಿಚಾರಗಳನ್ನು ನಾವು ಚರ್ಚೆಗೆ ಕೈಗೆತ್ತಿಕೊಳ್ಳಬಹುದು, ಆದಕಾರಣ ತಾವು ಹೋಗಬಹುದು. ಆದರೆ ಹೋದ ಕೆಲಸ ಅರ್ಧಂಬರ್ಧ ಆಗತಕ್ಕಂಥದ್ದು ಆಗಬಾರದು ಎಂದು ಹೇಳುವಂಥ ಸಲಹೆಗಳು ಕೂಡ ಅಲ್ಲಿ ಬಂತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ನಾನು ನಾಲ್ಕು ದಿವಸ ಹೋಗುತ್ತೇನೆ ಎನ್ನುವುದಕ್ಕೆ ತಮ್ಮ ಒಪ್ಪಿಗೆಯನ್ನೂ ಕೂಡ ಪಡೆದುಕೊಂಡಿದ್ದರು ಮತ್ತು ಇದನ್ನು ತಮ್ಮೆಲ್ಲರ ಎದುರು ಈ ವಿಚಾರವನ್ನು ತಿಳಿಸಿದರು. ಅನಿವಾರ್ಯವಾಗಿರತಕ್ಕಂಥ ಸಂದರ್ಭಗಳಲ್ಲಿ ಲೋಕಸಭೆಯಲ್ಲಿ ನಡೆಯತಕ್ಕಂಥ ಸಂದರ್ಭಗಳಲ್ಲಿಯೂ ಕೂಡ ಸದನ ನಡೆಯುವ ಸಂದರ್ಭದಲ್ಲಿಯೂ ಕೂಡ ಪ್ರಧಾನಮಂತ್ರಿಗಳು ಹೋಗಿರತಕ್ಕಂಥ ಅನೇಕ ಉದಾಹರಣೆಗಳಿವೆ. ಇಲ್ಲಿಯೂ ಕೂಡ ಅನೇಕ ಮುಖ್ಯಮಂತ್ರಿಗಳು ಸದನ ನಡೆಯತಕ್ಕಂಥ ಸಂದರ್ಭಗಳಲ್ಲಿ ಹೋಗಿರುವುದು ಇದೆ ನಮ್ಮ ಕಲಾಪಗಳ ಉದ್ದೇಶವೇನು, ಒಳ್ಳೆಯ ಸರ್ಕಾರ ಮತ್ತು ಅಭಿವೃದ್ಧಿ. ಆ

ರೀತಿಯಾದಂಥ ಅಭಿವೃದ್ಧಿ ಮತ್ತು ತುರ್ತಾದಂಥ ಕೆಲಸವಿದ್ದಾಗ ಆ ಕೆಲಸವನ್ನು ನೀವು ಮಾಡಲೇಬೇಕಾಗುತ್ತದೆ ಎಂದೇ ತಮ್ಮ ಒಪ್ಪಿಗೆಯನ್ನು ಪಡೆದುಕೊಂಡು ಹೋಗಿದ್ದಾರೆ. ಆದರೆ ಇದೇ ಒಂದು ಸಂಪ್ರದಾಯ ಆಗಬಾರದು. ಸದನ ನಡೆಯುವಾಗ ಯಾರೊಬ್ಬರೂ ಕೂಡ ಟೂರ್ ಹೋಗತಕ್ಕಂಥದ್ದೂ ಕೂಡ ಸರಿಯಾದುದಲ್ಲ ಎನ್ನತಕ್ಕಂಥ ಮಾತನ್ನು ನಾನು ಖಂಡಿತ ಒಪ್ಪಿಕೊಳ್ಳುತ್ತೇನೆ. ನಾನು ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಸದನದಲ್ಲಿ ಕೊಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿದ್ದಾಗ, ಬೆಂಗಳೂರಿನಲ್ಲಿಯೇ ಇದ್ದಾಗ ಎಷ್ಟು ಸಮಯ ಈ ಶಾಸನಸಭೆಯಲ್ಲಿ ಕುಳಿತು ಅವರು ಇಲ್ಲಿದ್ದರು ಎಂಬ ಬಗ್ಗೆ ಒಂದು ತನಿಖೆಯಾಗಿಬಿಡಲಿ. ಆಯಿತು, ಅವರಿಗೆ ಈ ಮನೆಯ ಬಗ್ಗೆ ಅಷ್ಟು ಗೌರವ ಇದ್ದರೆ ಇಲ್ಲಿದ್ದಾಗ ಕೂಡ ಎಷ್ಟು ಸಮಯ ಬಂದು ಇಲ್ಲಿ ಈ ಸಭೆಯಲ್ಲಿ ಕುಳಿತುಕೊಂಡು ಅವರು ಸಭೆಗೆ ಗೌರವವನ್ನು ಕಾಪಾಡಿದ್ದಾರೆ ಎಂದು ಒಂದು ವಿಚಾರ ಗೊತ್ತಾಗಬೇಕು. ನಿನ್ನೆ ಬರಬೇಕಾದ ವಿಷಯವನ್ನು ಮುಖ್ಯ ಮಂತ್ರಿಗಳು ಊರಿನಲ್ಲಿ ಇರುವುದಿಲ್ಲವೆಂದು ತಾವು ಅವರಿಗೆ ಕನ್‌ವಿನ್ಸ್ ಮಾಡಿ ಮುಂದಕ್ಕೆ ಹಾಕಿದ್ದಿರಿ. ನಿನ್ನೆಯೆಲ್ಲಾ ಅವರು ಬೆಂಗಳೂರಿನಲ್ಲಿಯೇ ಇದ್ದರೆ ಅರ್ಥ ಏನು ಬಂತು? ನಿನ್ನೆ ಮಾನ್ಯ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ ವಿಚಾರ ರೂಲ್ 69 ರಡಿಯಲ್ಲಿ ಚರ್ಚೆಯಾಗಬಹುದಾಗಿತ್ತು. ಅಜೆಂಡಾದಲ್ಲಿ ತರುವುದು ನೀವು ಸೋಮವಾರ ಮಾತನಾಡಿ ಎಂದು ಹೇಳುವುದು, ಆಮೇಲೆ ಮುಂದಕ್ಕೆ ಹಾಕುವುದು, ಆದರೆ ಮುಖ್ಯಮಂತ್ರಿಗಳು ಊರಿನಲ್ಲಿಯೇ ಇರುವುದು, ನಾವು ಮುಖ್ಯಮಂತ್ರಿಗಳು ಇಲ್ಲವೆಂದು ಎರಡು ದಿವಸ ಮುಂದಕ್ಕೆ ಹೋಗಿದೆ ಚರ್ಚೆ ಎಂದು ನಾವು ಭಾವಿಸಿಕೊಳ್ಳುವುದಾದರೆ, ಹೀಗಾದರೆ ಇದ್ಯಾರಿಗಾದರೂ ಗೌರವ ಬರುತ್ತದೆಯೇ? ಆಮೇಲೆ ತಾವು ತಪ್ಪು ಮಾಹಿತಿಯನ್ನು ತಿಳಿದುಕೊಂಡಿದ್ದಿರಿ. ನಾವು ಅವ್ತೊತ್ತು ಬರಲಿಲ್ಲ ಎಂದು ಹೇಳಲಿಲ್ಲ ಸಾರ್. ಅವ್ತೊತ್ತು ನಮ್ಮ ಎದುರಿಗೇ ತೀರ್ಮಾನವಾಯಿತು. ಕಾಂಗ್ರೆಸ್‌ನವರಿದ್ದರು, ನಮ್ಮ ಕ್ಷೇತ್ರದ ಕೆಲಸವಾಗಲಿಲ್ಲ ಎಂದು, ಎರಡು ದಿವಸವೆಲ್ಲಾ ಅವರು ಬೈಕಾಟ್ ಮಾಡಿದರಲ್ಲಾ, ಬೆಳಿಗ್ಗೆ ಎದ್ದು ರಾಜಿ ಆಗಬೇಕಾದ ಸಭೆಗೆ ಬೇರೆ ಯಾವ ಪಕ್ಷದವರನ್ನೂ ನೀವು ಕರೆಯಲೇ ಇಲ್ಲ. ವಿರೋಧ ಪಕ್ಷವಾಗಿ ವಿರೋಧ ಮಾಡಿ ಎರಡು ದಿವಸ ಅಸೆಂಬ್ಲಿ ಮುಂದಕ್ಕೆ ಹೋಗಿ ಮೂರನೆಯ ದಿವಸ ಇಲ್ಲಿ ಅಸೆಂಬ್ಲಿ ನಡೆಯಬೇಕಾದರೆ ನಮಗೇನೂ ಗೊತ್ತಿಲ್ಲ. ನಾವು ಆ ಕಾರಣಕ್ಕಾಗಿಯೇ ಹೇಳಿದ್ದು, ಬಿಡಪ್ಪಾ ನಮ್ಮದು ಲೆಕ್ಕಕ್ಕಿಲ್ಲದ ಪಾರ್ಟಿಯವರಿದ್ದೇವೆ, ನಾವು ಬರೋದಿಲ್ಲ, ದೊಡ್ಡ ದೊಡ್ಡ ಪಕ್ಷದವರೇ ಒಂದಾಗಿ ಅಸೆಂಬ್ಲಿ ನಡೆಸಿಬಿಡಿ ಸಾಕು, ಇನ್ನು ಮುಂದೆ ಅಸೆಂಬ್ಲಿ ಬೈಕಾಟ್ ಮಾಡದೇ ಇದ್ದರೆ ಸಾಕು, ಅಸೆಂಬ್ಲಿಯನ್ನು ಎರಡ್ಮೂರು ದಿವಸ ನಿಲ್ಲಿಸದೇ ಇದ್ದರೆ ಸಾಕು, ಮಾಡಿಕೊಳ್ಳಿ ಸಂತೋಷ ಎಂದು ನಾವು ಹೇಳಿದ್ದೇವೆ. ಅವರ ಕ್ಷೇತ್ರದಲ್ಲಿ ಕೆಲಸ ನಡೆದಿಲ್ಲ ಎಂದು ಹೇಳಿದ ದಿವಸ ನಾವು ಹಾಜರಿದ್ದೆವು. ನಾವೇ ಹೋಗಿ ಕರೆದುಕೊಂಡು ಬಂದು ಕೂರಿಸಿಕೊಂಡೆವು, ಬನ್ನಿ ಏನಾದರೂ ತೀರ್ಮಾನವಾಗಲಿ ಎಂದು ಕರೆದುಕೊಂಡು ಬಂದೆವು. ಈ ಎರಡೂ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು ನನಗೆ ಹಣ ಕೊಡುವುದಕ್ಕೆ ಬಂದರು ಎಂದು ಹೇಳಿಕೆ ಮಾಡಿದ್ದಾರೆ, ಅದು ತೀರ್ಮಾನವಾಗಲಿ ಎಂದು ರೈಸ್

ಮಾಡಿ ಎರಡು ದಿವಸ ಸಭೆ ಮುಂದಕ್ಕೆ ಹೋದಾಗ ಮತ್ತೆ ಸಭೆ ಶುರುವಾಯಿತಲ್ಲಾ, ಮತ್ತೆ ಯಾವುದೇ ಚರ್ಚೆ ಇಲ್ಲದೇ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟು ನೀವು ಇತ್ಯರ್ಥ ಮಾಡಿಬಿಟ್ಟರಲ್ಲಾ, ಈ ವ್ಯವಹಾರ ನಮಗ್ಯಾರಿಗೂ ಗೊತ್ತಿಲ್ಲ. ಏನು ಚರ್ಚೆ ಆಯಿತು, ಅಷ್ಟೊಂದು ದೊಡ್ಡ ಇಶ್ಯೂ ಆಗಿದ್ದು ಅಷ್ಟು ಬೇಗ ಹೇಗೆ ತಿಳಿಯಾಯಿತು ವಾತಾವರಣ? ನಾವು ಹೇಗೆ ವಿರೋಧ ಪಕ್ಷದ ಸಾಲಿನಲ್ಲಿ ಕುಳಿತು ಕೆಲಸ ಮಾಡಬೇಕು? ನನಗೆ ಅರ್ಥವಾಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ನಾವು ಬರುವುದಿಲ್ಲ ನೀವು ಏನು ಬೇಕೋ ಮಾಡಿಕೊಳ್ಳಿ ಎಂದು ಹೇಳಿದ್ದನ್ನು ಬಿಟ್ಟರೆ ಅವ್ರೊತ್ತಿಂದು ಮಾನ್ಯ ಶಿವರಾಂರವರ ಗಲಾಟೆಯದ್ದಲ್ಲ ಅದು. ಅದು ಹೇಗೆ ತೀರ್ಮಾನವಾಯಿತು, ಅಷ್ಟೊಂದು ಆಕ್ರೋಶಕ್ಕೆ ಹೋಗಿದ್ದು ಅಷ್ಟೊಂದು ಬೆಂಕಿ ಹಚ್ಚಿಕೊಂಡದ್ದು ದಿಢೀರ್ ಎಂದು ತಣ್ಣಗಾಗಿದೆ ಎಂದರೆ ಏನು ನಡೆಯಿತು ಎಂಬುದು ನಮಗೆ ಗೊತ್ತಾಗಬೇಕಲ್ಲಾ. ಸಭೆಗೂ ಗೊತ್ತಾಗಲಿಲ್ಲ ಮತ್ತು ಫ್ಲೋರ್ ಲೀಡರ್‌ಗಳಿಗೂ ಗೊತ್ತಾಗಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಏನು ಬೇಕಾದರೂ ಹೇಳಲಿ ನನ್ನದೇನೂ ತಕರಾರಿಲ್ಲ. ಎಲ್ಲೋ ಒಂದು ಕಡೆಗೆ ನಮ್ಮನ್ನು insinuate ಮಾಡಿದಾಗ, ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಬೆಂಕಿ ಬಿದ್ದಿತ್ತು, ತಣ್ಣಗಾಗಿಹೋಯಿತು ಅಂದರೆ ....

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ನಿಮ್ಮ ಬಗ್ಗೆ ಹೇಳಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ತಾವು ಒಂದ್ನಿಮಿಷ ಇರಿ. ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಕಛೇರಿಯಿಂದ ಹೇಳಿ ಕಳುಹಿಸಿದಿರಿ. ನಾವು ನಿಮ್ಮ ಮುಂದೆ ಮುಖ್ಯ ಮಂತ್ರಿಗಳಿಗೆ ನೇರವಾಗಿ ಮೂರು ಆಪ್‌ಶನ್ ಇಟ್ಟೆವು. ನೀವು ಮಾಡಿರತಕ್ಕಂಥ ಹೇಳಿಕೆಯನ್ನು ಇಲ್ಲ ಎಂದು ಹೇಳಿ, ಅಥವಾ ಯಾರ ಮೇಲೆ ಹೇಳಿದಿರಿ ಆ ಎರಡು ಹೆಸರುಗಳನ್ನು ಬಹಿರಂಗ ಪಡಿಸಿ, ಅವು ಎರಡು ಇಲ್ಲದಿದ್ದರೆ ಈ ವಿಚಾರವನ್ನು ನ್ಯಾಯಾಂಗದ ಒಪೀನಿಯನ್‌ಗೆ ಕಳುಹಿಸಿಕೊಡಿ ಎಂದು ಹೇಳಿದ್ದೆವು. ಅವರು ಒಂದು ಆಪ್‌ಶನ್‌ನ್ನು ಒಪ್ಪಿಕೊಂಡರು, ನಾನು ಹೇಳಿಕೆ ಮಾಡಲಿಲ್ಲ, ರೀತಿಯಲ್ಲಿ ಯಾವುದನ್ನೂ ನಾನು ಹೇಳಲಿಲ್ಲ ಎಂದು ಬಂದು ಹೇಳಿದರು. ಅದು ಆದಮೇಲೆ ಅಷ್ಟೇ ನಡೆದದ್ದು ಬೆಂಕಿ ತಣ್ಣಗಾಗುವುದಕ್ಕೆ ಬೇರೆ ಏನೂ ಆಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ಆ ಅಭಿಪ್ರಾಯದಲ್ಲಿ ಹೇಳಲಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನೋ, ನೋ, ನೋ, ನೀವು ಯಾವುದೇ ಅಭಿಪ್ರಾಯದಲ್ಲಿ ಹೇಳಿದ್ದರೂ ಕೂಡ ಬೆಂಕಿ ತಣ್ಣಗಾಗಿದ್ದು ಹೀಗೆ. ನಾನು ಹೇಳಿಯೇ ಇಲ್ಲವೆಂದು ಮುಖ್ಯಮಂತ್ರಿಗಳು ಹೇಳಿದ ಮೇಲೂ ನಾವು ಅವರ ಕತ್ತು ಹಿಡಿದುಕೊಳ್ಳುವುದಕ್ಕೆ ಆಗುತ್ತದೆಯೇ? ಆಗೋದಿಲ್ಲ. ಆಯ್ತಪ್ಪ ಸದನಕ್ಕೆ ಬಂದು ಕುಳಿತುಕೊಳ್ಳುತ್ತೇವೆ, ನೀವು ಹೇಳಿಕೆ ಮಾಡಿ ಎಂದು ಹೇಳಿದೆವು. ಅವರು ಕೂಡ ಸದನದಲ್ಲಿ ಹೇಳಿಲ್ಲವೆಂದೇ ಹೇಳಿದರು.

ಶ್ರೀ ವಾಟಾಳ್ ನಾಗರಾಜ್: ಅವರ ಕತ್ತನ್ನು ನೀವು ಹಿಡಿದುಕೊಳ್ಳಿ ಎಂದು ನಾವು ಹೇಳಲಿಲ್ಲ. ಆ ಪ್ರಶ್ನೆಯೇ ಬರಲಿಲ್ಲ. ನಾವು ಅದರ ಬಗ್ಗೆ ಮಾತೇ ಆಡಲಿಲ್ಲ. ಏನು ಬೇಕಾದರೂ

ತೀರ್ಮಾನ ತೆಗೆದುಕೊಳ್ಳಲಿ. ನಾವು ಆಗ ಇರಲಿಲ್ಲವೆಂದಷ್ಟೇ ಹೇಳುತ್ತಿದ್ದೇವೆಯೇ ಹೊರತು ನೀವು ಏನು ತೀರ್ಮಾನಕ್ಕೆ ಬಂದಿರಿ ಎಂದು ನಾವು ಏನೂ ಹೇಳಲಿಲ್ಲ. ನಾವಾಗಲೀ ಮಾನ್ಯ ಮಾಧುಸ್ವಾಮಿಯಾಗಲೀ ಶ್ರೀರಾಮರೆಡ್ಡಿಯಾಗಲೀ ನಾವ್ಯಾರೂ ಇರಲಿಲ್ಲ. ನಾವ್ಯಾಕೆ ಬರಲಿಲ್ಲ ಎನ್ನುವುದನ್ನು ನಾವು ಹೇಳಿದ್ದೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಆವೊತ್ತು ನೀವು ಇರದಿದ್ದ ಬಗ್ಗೆ ನಾವು ಹೇಳುವುದಿಲ್ಲ. ಅದು ನಿಮ್ಮ ವಿವೇಚನೆಗೆ ಬಿಟ್ಟ ವಿಚಾರ. ಆದರೆ ನಿನ್ನೆ ಮುಖ್ಯಮಂತ್ರಿಗಳು ಇರಬೇಕು ಎಂದು ಹೇಳಿ ನಾವು ನಿಮ್ಮ ಹತ್ತಿರ ವಾದ ಮಾಡಿದೆವು. ಅವರಿಗೂ ಅಫೀಲ್ ಮಾಡಿಕೊಂಡೆವು. ಅದೇನೋ ಹೇಳಿದರು, ದೊಡ್ಡ ಪಕ್ಷಗಳವರು, ಬಾಯ್‌ಕಾಟ್ ಮಾಡುತ್ತಾರೆ ಎಂದರು. ಅಂದರೇನು ದೊಡ್ಡ ಪಕ್ಷದವರಾದ ನಮಗೆ ಬೇರೇನೋ ಕೆಲಸವಿಲ್ಲವೆ? ಬಾಯ್‌ಕಾಟ್ ಮಾಡುವುದಷ್ಟೇ; ಇವರಷ್ಟೇ ಮಾತ್ರ ಅರ್ಥಗರ್ಭಿತವಾದ ವ್ಯವಹಾರ ನಡೆಸುವುದಕ್ಕೆ ಬಂದಿದ್ದಾರೆ, ಆದರೆ ನಾವು ಇಲ್ಲಿ ಬಾಯ್‌ಕಾಟ್ ಮಾಡಿ ಬ್ಲ್ಯಾಕ್‌ಮೇಲ್ ಮಾಡುವುದಕ್ಕೆ ಬಂದಿದ್ದೇವೆಯೇ?

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ನಮ್ಮ ಪ್ರಶ್ನೆ ಅದಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮ್ಮ ಪ್ರಶ್ನೆ ಅದಲ್ಲ.

ಅಧ್ಯಕ್ಷರು: ಈಗ ಆ ವಿಚಾರ ಬೇಡ. ಅವೆಲ್ಲಾ ಮುಗಿದುಹೋದ ಅಧ್ಯಾಯ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮ್ಮ ಪ್ರಶ್ನೆ ಅದಲ್ಲ ಅಧ್ಯಕ್ಷರೆ, ಅವರು ಮಾತ್ತೆತ್ತಿದರೆ ನಮ್ಮನ್ನು insinuate ಮಾಡುತ್ತೀರಿ ಎಂದು ಹೇಳುತ್ತಾರೆ. ನಾವು ಆ ಉದ್ದೇಶದಿಂದ ಮಾತನಾಡಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್:ನೀವು ನಮಗೆ insinuate ಮಾಡಿದ್ದಕ್ಕಾಗಿಯೇ ನಾನು ಕ್ಲಾರಿಫೈ ಮಾಡುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಮಗೆ ಆ ಉದ್ದೇಶವೇ ಇರಲಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್:ಅವರ ವಿಚಾರ ಬಂದಾಗ ಮುಖ್ಯ ಮಂತ್ರಿಗಳು ಇರಬೇಕು ಎಂದು ನಾವೇ ರಿಕ್ವೆಸ್ಟ್ ಮಾಡಿಕೊಂಡೆವು. ಅವರನ್ನೂ ಕೇಳಿದೆವು ಮತ್ತು ನಿಮ್ಮನ್ನೂ ಕೇಳಿಕೊಂಡೆವು. ನಿನ್ನೆ ಹೇಳಿ ಕಳುಹಿಸಿದಾಗಲೂ ಕೂಡ.....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾವು ನಿನ್ನೆ ನಡೆದದ್ದರ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ತಾವು ಹೇಳಿ ಕಳುಹಿಸಿದಿರಿ. ಆಗಲೂ ನಾವು ಕೇಳಿದ್ದೇವೆ.

ಅಧ್ಯಕ್ಷರು: ಮಾನ್ಯ ರಮೇಶ್‌ಕುಮಾರ್‌ರವರೇ, ಇನ್ನು ಮುಂದಿನ ಬಿ.ಎ.ಸಿ.ಗಳಲ್ಲಿ ಎಲ್ಲಾ ಹಾಜರಾಗಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡು ಇದನ್ನು ಇಲ್ಲಿಗೇ ಮುಗಿಸೋಣ. ಈಗ ವಾಟಾಳ್ ನಾಗರಾಜ್‌ರವರ ಪ್ರಶ್ನೆ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ. ಮಾನ್ಯ ಮುಖ್ಯ ಮಂತ್ರಿಗಳು ಸಿಂಗಾಪುರ ಹಾಗೂ ಮಲೇಶಿಯಾ ದೇಶಗಳಿಗೆ ಹೋಗಿದ್ದಾರೆ. ನಮ್ಮ ದೇಶದಲ್ಲಿ ಬಂಡವಾಳ ಹೂಡಲು

ಬಂಡವಾಳದಾರರನ್ನು ಮೀಟ್ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ. ಇಲ್ಲಿ ಇರುವವರನ್ನೇ ಓಡಿಸುತ್ತಿದ್ದಾರೆ, ಇನ್ನು ಅವರನ್ನೇಕೇ ಕರೆಯಬೇಕು ಸ್ವಾಮಿ? ಇಲ್ಲಿ ಇರುವವರನ್ನೇ ಓಡಿಸುತ್ತಿದ್ದೀರಿ. ಹೀಗಿರುವಾಗ ಇನ್ನು ಅವರನ್ನು ಕರೆದು ಏನು ಮಾಡಿಸುತ್ತೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ತಾವು ಹೇಳಿದಿರಿ. ಬಂಡವಾಳ ತರುವುದಕ್ಕೆ ಹೋಗಿದ್ದಾರೆ ಎಂದಿರಿ. ಅಂದರೆ ಈಗ ಬಂಡವಾಳ ಇಲ್ಲದ ಸರ್ಕಾರ ಇದಾಗಿದೆ. ಬಂಡವಾಳ ತರುವುದಕ್ಕೆ ಹೋಗಿದ್ದಾರೆ ಎಂದಿರಿ. ಒಂದು ಕಡೆ ಜಯಕುಮಾರ್ ಎಲ್ಲಿದ್ದಾರೆ? ಹೇಳಿ. ಎಲ್ಲಿಗೆ ಹೋದರು ಅವರು? ಅವರು ಯಾವ ದೇಶಕ್ಕೆ ಹೋದರು? ಮುಖ್ಯಮಂತ್ರಿ ಸಿಂಗಾಪುರಕ್ಕೆ ಹೋದರು. ಜಯಕುಮಾರ್ ಜರ್ಮನಿಗೆ ಹೋಗಿದ್ದಾರೆಯೇ? ಎಲ್ಲಿಗೆ ಹೋಗಿದ್ದಾರೆ ಅವರು? ಏನು ಹುಡುಗಾಟ ಇದು, ಸದನವೇ ಅಥವಾ ಏನಿದು? ಏನಿದು ಇಂಥ ಪರಿಸ್ಥಿತಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಈ ಬಗ್ಗೆ ದಯವಿಟ್ಟು ಆಲೋಚನೆಯನ್ನು ಮಾಡಿ. ಈ ಸದನ ನಡೆಯುತ್ತಿದೆ. ಈ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಈ ಸದನವನ್ನು ನಿರ್ಲಕ್ಷ್ಯ ಮಾಡಿ ವಿದೇಶಗಳಿಗೆ ಹಾಗೂ ಬೇರೆ ಬೇರೆ ಕಡೆಗಳಿಗೆ ಹೋಗುವುದು ಎಷ್ಟರಮಟ್ಟಿಗೆ ಸರಿ ಇದೆ, ಎಷ್ಟರಮಟ್ಟಿಗೆ ಈ ಸದನಕ್ಕೆ ಗೌರವ ತರುತ್ತದೆ ಎಂಬುದನ್ನು ತಾವು ಯೋಚನೆ ಮಾಡಿ. ಅವರ ಮೇಲೆ ಅಪವಾದ ತರಬೇಕು ಎಂದು ನಾವು ಹೇಳುತ್ತಿಲ್ಲ. ದಯವಿಟ್ಟು ನಮ್ಮ ಕಳಕಳಿಯನ್ನು ಅರ್ಥಮಾಡಿಕೊಳ್ಳಿ..

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ನಾನು ಒಂದು ದಿನವೂ ಗೈರು ಹಾಜರಾಗಿಲ್ಲ. ಇತಿಹಾಸದಲ್ಲಿದೆ. ಇತಿಹಾಸಕ್ಕೆ ಹೋಗುತ್ತದೆ ಇದು.

ಅಧ್ಯಕ್ಷರು:ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಿ.ಎ.ಸಿ.ಯಲ್ಲಿ ಪ್ರಸ್ತಾಪ ಮಾಡಿದರು. ನಾನೂಕೂಡ ಅವರಿಗೆ ಈ ಬಗ್ಗೆ ಹೇಳುವಾಗ ಯಾವ ಮಂತ್ರಿಗಳೂ ಕೂಡ ಹೋಗಬಾರದು. ಆದರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ನನ್ನ ಅನುಮತಿಯನ್ನು ಪಡೆದು ಹೋಗಬೇಕೆಂದು ಅವೊತ್ತು ಬಿ.ಎ.ಸಿ.ಯಲ್ಲಿಯೇ ವಿನಂತಿಯನ್ನು ಮಾಡಿದ್ದೇವೆ. ಈಗ ಅದನ್ನು ಮುಕ್ತಾಯ ಮಾಡೋಣ. ಈಗ ಮಾನ್ಯ ಪ್ರಕಾಶ್‌ರವರು ಉತ್ತರ ನೀಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಹೇಳಿದ್ದು ಕಡತಕ್ಕೆ ಹೋಗಿರುವುದರಿಂದ ಅದಕ್ಕೆ ಇಷ್ಟೇ ನನ್ನ ಉತ್ತರ ಹೇಳಬಯಸುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ: ನಾನು ತಪ್ಪೇನು ಹೇಳಿದೆ? ನಾವು ಹೇಳಿದ್ದು ನೀವು ಇನ್‌ವೆಸ್ಟ್‌ರ್ಸ್‌ಗಳನ್ನು ಕರೆದುಕೊಂಡು ಬರುವುದಕ್ಕೆ ಹೋಗಿ ಇಲ್ಲಿರುವವರನ್ನೇ ಓಡಿಸುತ್ತಿದ್ದೀರಲ್ಲಾ ಸ್ವಾಮಿ ಎಂದು ಹೇಳಿದೆ. ಇದರಲ್ಲಿ ತಪ್ಪೇನಿದೆ?

(ಅಡಚಣೆ)

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ಮಾನ್ಯ ಪ್ರಕಾಶ್‌ರವರು ಉತ್ತರ ಹೇಳಲಿ ಬಿಡಿ. ಈಗಾಗಲೇ ಪ್ರಶ್ನೋತ್ತರ ಆರಂಭವಾಗಿ ಒಂದು ಗಂಟೆಯಾಗಿದೆ.

(ಅಡಚಣೆ)

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಶ್ರೀನಿವಾಸಗೌಡರೊಬ್ಬರೇ ಈ ರಾಜ್ಯದ ಹಿತವನ್ನು ಬಯಸತಕ್ಕಂಥವರು. ಬೇರೆ ಯಾರೂ ಹಿತ ಬಯಸುವುದಿಲ್ಲ.

(ಅಡಚಣೆ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಪ್ರಕಾಶ್‌ರವರು ಉತ್ತರ ಹೇಳಲಿ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬಂಡವಾಳ ಹೂಡಿದಂಥವರು ಕರ್ನಾಟಕದಿಂದ ಹೊರಟುಹೋಗಿದ್ದಾರೆ ಎನ್ನುವಂಥದ್ದು ಸತ್ಯಕ್ಕೆ ದೂರವಾದಂಥದ್ದು. ಆದರೆ ಭಾರತ ದೇಶದಿಂದಲೇ ಬಿಟ್ಟು ಹೋಗುವಂಥ ಸನ್ನಿವೇಶ ಬಂದಿದೆ. ಹಣದುಬ್ಬರ, ಪೆಟ್ರೋಲ್ ಬೆಲೆ ಡೀಸಲ್ ಬೆಲೆ ಏರಿರತಕ್ಕಂಥದ್ದು, ಈ ಇನ್‌ಫ್ಲೀಶನ್‌ನಿಂದ ಏನೆಲ್ಲಾ ಆಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಪ್ರಧಾನಮಂತ್ರಿಗಳೇ ಹೆಚ್ಚು ಆತಂಕವನ್ನು ವ್ಯಕ್ತಮಾಡಿದಂಥ ಹಿನ್ನೆಲೆಯಲ್ಲಿ ಪ್ರಾಯಶ: ಬಂಡವಾಳಗಾರರು ಈ ದೇಶದಲ್ಲಿ ಮತ್ತೆ ಬಂಡವಾಳ ಹೂಡಬೇಕೇ ಅಥವಾ ಬೇಡವೇ ಎನ್ನುವುದರ ಬಗ್ಗೆ ಪುನರ್‌ಚಿಂತನೆ ನಡೆದಿದೆ. ಕರ್ನಾಟಕದಲ್ಲಿ ಇನ್ನೂ ಅಂಥ ದುಸ್ಥಿತಿ ಬಂದಿಲ್ಲ. ಇನ್ನೂ ಬಹಳ ಜನ ಬಂದಿದ್ದಾರೆ. ಸ್ವತ: ಮಲೇಶಿಯಾ ಪ್ರಧಾನ ಮಂತ್ರಿ, ಸಿಂಗಾಪುರದ ಪ್ರಧಾನಮಂತ್ರಿ ಬಂಡವಾಳವನ್ನು ಕರ್ನಾಟಕ ರಾಜ್ಯದಲ್ಲಿ ಹೂಡುತ್ತೇವೆಂದು ಹೇಳಿ ವೈಯಕ್ತಿಕ ಆಹ್ವಾನ ಪತ್ರಿಕೆಯನ್ನು ಮುಖ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿರುವುದೇ ಅದರ ಸಾಕ್ಷಿಗೆ ಆರೋಗ್ಯಕರವಾಗಿರತಕ್ಕಂಥ ವಾತಾವರಣ ಇಲ್ಲಿ ಇದೆ.

ಶ್ರೀ ಕೆ. ಶ್ರೀನಿವಾಸಗೌಡ: ಹಾಗಾದರೆ ಇನ್‌ಫೋಸಿಸ್ ಮೈಸೂರಿಗೆ ಹೋಗ ಬೇಕಾಗಿರು –ವುದು ಏಕೆ ಚೆನ್ನೈಗೆ ಹೋಯಿತು? ಹೇಳಿ. ಬಂಡವಾಳದಾರರಾದ ನೋಕಿಯಾ ಹೈದಾರಾಬಾದ್‌ಗೆ ಏಕೆ ಹೋಯಿತು?

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಫ್ಯಾಬ್ ಸಿಟ ಹೈದಾರಾಬಾದ್‌ಗೆ ಹೋಯಿತು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಇದಕ್ಕಾಗಿ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತನ್ನಿ.

(ಅಡಚಣೆ)

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರೆ, ಸುಮ್ಮನೆ ಮಾತು ಬೆಳೆಸಬೇಡಿ.

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಯಾಗಲಿ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ ಶ್ರೀನಿವಾಸಗೌಡರೊಬ್ಬರೇ ಈ ರಾಜ್ಯದ ಹಿತವನ್ನು ಬಯಸುವವರಲ್ಲ.

ಅಧ್ಯಕ್ಷರು: ಈಗ ದಯಮಾಡಿ ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಕೊಡುತ್ತಾರೆ. ಆಯಿತು ಮಾನ್ಯ ಚಲುವರಾಯಸ್ವಾಮಿಯವರೇ ಕುಳಿತುಕೊಳ್ಳಿ ದಯಮಾಡಿ.

ಶ್ರೀ ಎನ್.ಚಲುವರಾಯಸ್ವಾಮಿ: ಪತ್ರಿಕೆಗೆ ಮೆಸೇಜ್ ತಪ್ಪಾಗಿ ಹೋಗುವುದು ಬೇಡ. ಅಪರಷ್ಟೆ ಕಾಳಜಿಯನ್ನು ಈ ರಾಜ್ಯದಲ್ಲಿ ಇಟ್ಟುಕೊಂಡಿದ್ದೇವೆ. ಇನ್‌ವೆಸ್ಟರ್ಸ್ ಅನ್ನು ಕರೆದುಕೊಂಡು

ಬರುವುದು, ಕಳುಹಿಸುವುದು ಯಾರು ಎನ್ನುವುದರ ಬಗ್ಗೆ ಡಿಟೈಲಾಗಿ ಚರ್ಚೆ ಮಾಡಬೇಕೆಂದು ಇದ್ದರೆ ಮಾನ್ಯ ಶ್ರೀನಿವಾಸಗೌಡರು ಮಾಡಲಿ. ಅದಕ್ಕೆ ಒಂದು ದಿವಸ ಚರ್ಚೆಯನ್ನು ಮಾಡೋಣ. ಅವರೊಬ್ಬರೆ ಈ ರಾಜ್ಯದ ಹಿತವನ್ನು ಬಯಸುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನಮ್ಮ ವಿರೋಧ ಇಲ್ಲ. ಅಗತ್ಯವಿದ್ದರೆ ಹೋಗಬೇಕಾಗುತ್ತದೆ. ಆದರೆ ವಾಸ್ತವಾಂಶವನ್ನು ಹೇಳಬೇಕಾಗುತ್ತದೆ. ಹೇಳಿದ್ದೇವೆ.

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಬಂಡವಾಳ ಹೂಡಿಕೆದಾರರ ಸಂಖ್ಯೆ ಹೆಚ್ಚಾಗಿದೆ. ಶೇಕಡ 35 ರಷ್ಟು ಬಂಡವಾಳ ಹೂಡಿಕೆ ಈ ವರ್ಷದಲ್ಲಿ ಹೆಚ್ಚಳವಾಗುವಂತಹ ನಿರೀಕ್ಷೆ ಇದೆ. ಇವತ್ತು ಸ್ವಿರ್ಜರ್‌ಲ್ಯಾಂಡ್ ಕಂಪನಿಯವರು 5,000 ಕೋಟಿ ರೂಪಾಯಿ ಬಂಡವಾಳ ಹೂಡಿ ಉಡುಪಿಯಲ್ಲಿ ಪ್ರಾರಂಭ ಮಾಡುತ್ತೇವೆಂದು ಮುಂದೆ ಬಂದಿದ್ದಾರೆ. ಇನ್‌ವೆಸ್ಟ್‌ಮೆಂಟ್ ನಿಮಗಿಂತ ಜಾಸ್ತಿ ಮಾಡುತ್ತೇವೆ. ನಿಮ್ಮ ಕಾಲದಲ್ಲಿ ಏನಾಗಿದೆ ಅದಕ್ಕಿಂತ ಚೆನ್ನಾಗಿ ಮಾಡುತ್ತೇವೆ. ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎಂದು ಪಟ್ಟಿ ತೆಗೆಯಿರಿ: ನಾವು ಪಟ್ಟಿ ಕೊಡುತ್ತೇವೆ.

ಅಧ್ಯಕ್ಷರು: ಈಗ ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಶ್ನೆಗೆ ಉತ್ತರ.

ಶ್ರೀ ವಾಟಾಳ್ ನಾಗರಾಜ್: ಇರಲಿ. ಸದನ ನಡೆಯುವಾಗ ನಾವ್ಯಾರೂ ವಿದೇಶಕ್ಕೆ ಹೋಗುವುದಿಲ್ಲ. ಅದನ್ನು ತಮಗೆ ಹೇಳಿರುತ್ತೇನೆ, ನೀವು ಪುಕ್ಸಟ್ಟೆ ಕಳುಹಿಸಿದರೂ ನಾವು ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇನ್ವಿಟೇಷನ್ ಬೇಕಲ್ಲಾ ನಿಮಗೆ, ಇಲ್ಲದೆ ಹೋಗುತ್ತೀರಾ? ಅವರಿಗೆ ಇನ್ವಿಟೇಷನ್ ಇತ್ತು ಹೋದರು.

ಶ್ರೀ ವಾಟಾಳ್ ನಾಗರಾಜ್:ಮಾನ್ಯ ಅಧ್ಯಕ್ಷರು, ನೀವು ವಿದೇಶಕ್ಕೆ ಹೋಗಿ ಎಂದು ಹೇಳಿದರೂ ನಾವು ವಿದೇಶಕ್ಕೆ ಹೋಗುವುದಿಲ್ಲ. ಅಂದರೆ ಈ ಸದನದ ಬಗ್ಗೆ ಅಷ್ಟು ಗೌರವವನ್ನು ಇಟ್ಟುಕೊಂಡು ಈ ಸದನದಲ್ಲಿ ಇರುತ್ತೇವೆ. ಅದರ ಬಗ್ಗೆ ತಮಗೆ ಹೇಳುತ್ತಿದ್ದೇನೆ. ಆಹ್ವಾನ ಪತ್ರಿಕೆ ಬರುವುದು ಬಿಡುವುದು ಬೇರೆ ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ತೀರ್ಮಾನ ತೆಗೆದುಕೊಂಡು ನೀನು ಹೋಗಿ ಬಾರಪ್ಪ ಒಂದು ತಿಂಗಳು ಎಂದು ಹೇಳಿದರೆ ನಾನು ಹೋಗಿ ಬರುವುದಿಲ್ಲ. ಅದು ಸ್ಪಷ್ಟ ತಮಗೆ ಹೇಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ತಮ್ಮನ್ನು ಕಳುಹಿಸಬೇಕು ಎಂದು ತಮ್ಮ ಅಭಿಪ್ರಾಯವೇ?

ಅಧ್ಯಕ್ಷರು: ಈಗ ಪ್ರಶ್ನೆ ಕೇಳಿ.

ಶ್ರೀ ವಾಟಾಳ್ ನಾಗರಾಜ್: ಸದನ ನಡೆಯುವಾಗ ನಾವು ಹೋಗುವುದಿಲ್ಲವೆಂದು ಹೇಳಿದ್ದೇವೆ. ಅದು ಸ್ಪಷ್ಟ ಮಾನ್ಯ ಅಧ್ಯಕ್ಷರೆ, ನಿಮಗೆ ಏನಾದರೂ ನಮ್ಮನ್ನು ಕಳುಹಿಸಬೇಕೆಂದು ಉದ್ದೇಶವಿದ್ದರೆ ಸದನ ಮುಗಿದ ಮೇಲೆ ಕಳುಹಿಸಿ. ಈಗ ನೀವೇನೂ ಕಳುಹಿಸುವುದಕ್ಕೆ ಹೋಗಬೇಡಿ

ಮಾನ್ಯ ಅಧ್ಯಕ್ಷರೆ, ಮತ್ತೊಂದು ಬಾರಿ 754ನೇ ಪ್ರಶ್ನೆಯನ್ನು ಮುಖ್ಯಮಂತ್ರಿಯ ಸ್ಥಾನದಲ್ಲಿ ಇರತಕ್ಕಂಥ ಮಾನ್ಯ ಪ್ರಕಾಶ್‌ರವರಿಗೆ ಕೇಳುತ್ತೇನೆ. ಅದೂ ಇಲ್ಲವಾ?

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳ ಸ್ಥಾನದಲ್ಲಿ ಇಲ್ಲ. ಅವರ ಪರವಾಗಿ ತಾತ್ಕಾಲಿಕವಾಗಿ ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ತಾತ್ಕಾಲಿಕ ಮುಖ್ಯಮಂತ್ರಿ ಕೆಲಸವನ್ನು ವಹಿಸಿರತಕ್ಕಂಥ ಮಾನ್ಯ ಪ್ರಕಾಶ್‌ರವರನ್ನು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ವಾಟಾಳ್ ನಾಗರಾಜ್ ರವರು ಈ ಮನೆಯಲ್ಲಿ ಬೆಂಕಿ ಹೆಚ್ಚುವಂತಹ ಕೆಲಸವನ್ನು ಮಾಡುತ್ತಾರೆ. ನೋಡಿ ಅಲ್ಲಿ ಅವರ ಪಕ್ಕದಲ್ಲಿ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾರೆ, ಅವರನ್ನು ಬಿಟ್ಟು ಮಾನ್ಯ ಪ್ರಕಾಶ್‌ರವರು ತಾತ್ಕಾಲಿಕ ಮುಖ್ಯಮಂತ್ರಿಗಳು ಎಂದು ಹೇಳಿದರೆ ಅವರ ಗತಿಯೇನಾಗಬೇಕು?

ಒಬ್ಬರು ಮಾನ್ಯ ಸದಸ್ಯರು: ಈಗ ಅವರಿಬ್ಬರ ಮಧ್ಯೆ ಬೆಂಕಿಯನ್ನು ನೀವು ಹಚ್ಚುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ನಿಜವಾದ ಬೆಂಕಿಯನ್ನು ಹಚ್ಚಿದವನು ನಾನಲ್ಲ. ಮಾನ್ಯ ಖರ್ಗೆಯವರು ಬೆಂಕಿ ಹಚ್ಚಿದ್ದು ಈಗ. ಪಾಪ ಗಂಭೀರವಾಗಿ ಆರ್ಥಿಕ ಚಿಂತನೆಯನ್ನು ಮಾನ್ಯ ಯಡಿಯೂರಪ್ಪನವರು ಮಾಡುತ್ತಿರುವಾಗ ನಾವು ಅವರ ತಲೆ ಕೆಡಿಸುವುದು ಸರಿಯಲ್ಲ. ಅವರು ಈ ರಾಜ್ಯದಲ್ಲಿ ಯಾವ್ಯಾವ ಕಡೆಯಿಂದ ಎಷ್ಟೆಷ್ಟು ಹಣ ಬರಬೇಕೆಂದು ಹೇಳಿ ಚಿಂತನೆ ಮಾಡುತ್ತಾ ಕುಳಿತುಕೊಂಡಿರುವಾಗ, ನಾವು ಅವರ ತಲೆ ಕೆಡಿಸತಕ್ಕಂಥಾದ್ದು ಸರಿಯಲ್ಲ. ಮಾನ್ಯ ಅಧ್ಯಕ್ಷರೆ, ಈಗ ನಾನು ಮತ್ತೊಮ್ಮೆ 754ನೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿರುವ ಅರ್ಕಾವತಿ ಬಡಾವಣೆ ನಿವೇಶನಗಳ ಬಗ್ಗೆ.

754 ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರ್ಕಾವತಿ ಬಡಾವಣೆಯ ಕಾಮಗಾರಿಯು ಯಾವಾಗ ಆರಂಭವಾಯಿತು;

ಆ) ಅರ್ಕಾವತಿ ಬಡಾವಣೆಯಲ್ಲಿ ಎಷ್ಟು ನಿವೇಶನಗಳನ್ನು ಮಾಡಲು ಸರ್ಕಾರ ತೀರ್ಮಾನಿಸಿದೆ;

ಇ) ಬೆಂಗಳೂರು ನಗರದಲ್ಲಿ ನಿವೇಶನ ಕೋರಿ ಎಷ್ಟು ಜನ ಫಲಾನುಭವಿಗಳು ಇದುವರೆಗೂ ಮನವಿಯನ್ನು ಸಲ್ಲಿಸಿದ್ದಾರೆ;

ಈ) ಅರ್ಕಾವತಿ ಬಡಾವಣೆಯ ಕಾಮಗಾರಿಗೆ ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ.

ಉ) ಈ ಭೂಮಿಯನ್ನು ವಶಪಡಿಸಿಕೊಂಡ ರೈತರಿಗೆ ಇದುವರೆಗೂ ಕೊಟ್ಟಿರುವ ಹಣ ಎಷ್ಟು;

ಊ) ರೈತರಿಗೆ ಇನ್ನೂ ಕೊಡಬೇಕಾಗಿರುವ ಹಣವೆಷ್ಟು;